# ಕರ್ನಾಟಕ ವಿಧಾನಸಭೆ

()

## Questions For Written Answers

----

[Minister for Transport - Minister for Agriculture - Minister for Rural Development & Panchayat Raj - Minister for Youth Empowerment and Sports Department. and Minister for Social Welfare Department. ].

ಒಟ್ಟು ಪ್ರಶ್ನೆಗಳು - 15

----

### ಸಮುದಾಯ ಭವನಗಳು

1 **Mr. RIZWAN ARSHAD (Shivajinagar (162)):**

ಮಾನ್ಯ **Minister for Social Welfare Department.** ದಿನಾಂಕ:- ಅ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೂ ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾದ ಪರಿಶಿಷ್ಟ ಜಾತಿಗೆ ಸೇರಿದ ಭವನಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಪೂರ್ಣಗೊಂಡ ಹಾಗೂ ಅಪೂರ್ಣಗೊಂಡ ಮತ್ತು ಅನುದಾನ ಬಿಡುಗಡೆ ಆಗಿರುವ ಹಾಗೂ ಅನುದಾನ ಬಿಡುಗಡೆ ಆಗದಿರುವ ಭವನಗಳ ಸಂಖ್ಯೆ ಎಷ್ಟು; (ಸರ್ಕಾರದ ಆದೇಶದ ಪ್ರತಿಗಳೊಂದಿಗೆ ಕ್ಷೇತ್ರವಾರು ಸ್ಥಳಗಳ ವಿವರ ನೀಡುವುದು) ಆ) ಈ ಅಪೂರ್ಣಗೊಂಡ ಹಾಗೂ ಅನುದಾನ ಬಿಡುಗಡೆ ಆಗದಿರುವ ಭವನಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು)

----

15/10/19

### ನರೇಗಾ ಯೋಜನೆ

2 **ರಿಜ್ವಾನ್ ಅರ್ಷದ್ (ಶಿವಾಜಿನಗರ):**

ಮಾನ್ಯ **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -:- ಅ) ರಾಜ್ಯದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣಾ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ದುಡಿಯುವ ಕಾರ್ಮಿಕರಿಗೆ ವೇತನ ಬಿಡುಗಡೆ ಮಾಡುವಲ್ಲಿ ವಿಳಂಬ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಆ) ಬಂದಿದ್ದಲ್ಲಿ, ಈ ಯೋಜನೆಯಡಿಯಲ್ಲಿ ಪ್ರತಿ ತಿಂಗಳು ಸರಿಯಾದ ಸಮಯಕ್ಕೆ ವೇತನ ಬಿಡುಗಡೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) ಇ) ರಾಜ್ಯದಲ್ಲಿ ಈ ಯೋಜನೆ ಅಡಿಯಲ್ಲಿ ದುಡಿಯುವ ಕಾರ್ಮಿಕರ ಬಾಕಿ ಇರುವ ವೇತನವೆಷ್ಟು; ( ಜಿಲ್ಲಾವಾರು ವಿವರ ನೀಡುವುದು)

----

## ವಾಲ್ಮೀಕಿ ಸಮುದಾಯ ಭವನಗಳು

3 **Mr. RIZWAN ARSHAD (Shivajinagar (162)):**

ಮಾನ್ಯ **Minister for Social Welfare Department.** ದಿನಾಂಕ:- ಅ) ಕಳೆದ ಮೂರು ವರ್ಷಗಳಲ್ಲಿ ಚಾಮರಾಜನಗರ ಜಿಲ್ಲೆಗೆ ಮಂಜೂರು ಮಾಡಲಾದ ಪರಿಶಿಷ್ಠ ವರ್ಗದವರ ವಾಲ್ಮೀಕಿ ಭವನಗಳು ಹಾಗೂ ಸಮುದಾಯ ಭವನಗಳು ಎಷ್ಟು; (ವಿಧಾನ ಸಭೆ ಕ್ಷೇತ್ರವಾರು,ವರ್ಷವಾರು, ವಿವರವನ್ನು ಸರ್ಕಾರದ ಆದೇಶ ಪತ್ರಗಳೊಂದಿಗೆ ನೀಡುವುದು) ಆ) ಇವುಗಳಲ್ಲಿ ಪೂರ್ಣಗೊಂಡ ಹಾಗೂ ಅಪೂರ್ಣಗೊಂಡ ಮತ್ತು ಅನುದಾನ ಬಿಡುಗಡೆ ಆಗಿರುವ ಹಾಗೂ ಆಗದಿರುವ ಭವನಗಳ ಸಂಖ್ಯೆ ಎಷ್ಟು; (ಕ್ಷೇತ್ರವಾರು ವಿವರ ನೀಡುವುದು) ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು; (ವಿವರ ನೀಡುವುದು) ಈ) ಬಾಕಿ ಇರುವ ಅನುದಾನವನ್ನು ಬಿಡುಗಡೆ ಮಾಡಿ ಭವನಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)

----

## ಶುದ್ಧ ಕುಡಿಯುವ ನೀರು

4 **Mr. RIZWAN ARSHAD (Shivajinagar (162)):**

ಮಾನ್ಯ **Minister for Rural Development & Panchayat Raj** ದಿನಾಂಕ:- ಅ) ಕಳೆದ ಮೂರು ವರ್ಷಗಳಲ್ಲಿ ನೆಲಮಂಗಲ ವಿಧಾನ ಸಭಾ ಕ್ಷೇತ್ರಕ್ಕೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಗ್ರಾಮೀಣ ಪ್ರದೇಶಗಳಿಗೆ ಕೊಳವೆ ನೀರು ಸರಬರಾಜು ಯೋಜನೆ ಕಿರು ನೀರು ಸರಬರಾಜು ಕೈ ಪಂಪು ಕೊಳವೆ ಬಾವಿ ಯೋಜನೆಗಳಡಿ ಕುಡಿಯುವ ನೀರು ಒದಗಿಸಲು ಮಂಜೂರು ಮಾಡಲಾದ ಅನುದಾನವೆಷ್ಟು; (ಕಾಮಗಾರಿವಾರು ಹಂಚಿಕೆ ಮಾಡಿದ ಅನುದಾನದ ವಿವರ ನೀಡುವುದು) ಆ) ಸದರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಅಟಲ್ ಭೂಜಲ ಯೋಜನೆಯಡಿ ಕುಡಿಯುವ ನೀರು ಪೂರೈಸಲು ನಿಗದಿಪಡಿಸಿದ ಅನುದಾನವೆಷ್ಟು; ಈ ಯೋಜನೆಯಡಿ ಶುದ್ಧ ಕುಡಿಯುವ ನೀರು ಪೂರೈಸಲು ಗ್ರಾಮಗಳನ್ನು ಗುರುತಿಸಲಾಗಿದೆಯೆ; (ಗ್ರಾಮವಾರು ವಿವರ ನೀಡುವುದು) ಇ) ಅಟಲ್ ಭೂಜಲ ಯೋಜನೆ ಅನುಷ್ಠಾನ ಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಿಡುಗಡೆ ಮಾಡಿದ ಅನುದಾನವೇಷ್ಟು; ಈ) ಸದರಿ ಕ್ಷೇತ್ರಕ್ಕೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಮತ್ತು ಜಲ್ ಜೀವನ ಮಿಶನ್ ಯೋಜನೆಯಡಿ ನೀರು ಪೂರೈಸಲು ಸರ್ಕಾರಯಾವ ಕ್ರಮ ರೂಪಿಸ|ಲಾಗಿದೆ; ಈ ಯೋಜನೆ ಅನುಷ್ಠಾನಕ್ಕೆ ಇರುವ ಮಾನದಂಡಗಳೇನು; ಉ) ಸದರಿ ಕ್ಷೇತ್ರದಲ್ಲಿರುವ ಒಟ್ಟು ಶುದ್ದ ನೀರಿನ ಘಟಕಗಳ ಸಂಖ್ಯೆ ಎಷ್ಟು ಇವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ದುರಸ್ತಿ ಹಂತದಲ್ಲಿರುವ ಘಟಕಗಳೇಷ್ಟು; ಹೊಸ ಶುದ್ದ ನೀರಿನ ಘಟಕಗಳ ಸ್ಥಾಪನೆಗೆ ಇರುವ ಮಾನದಂಡಗಳೇನು? (ವಿವರ ನೀಡುವುದು)

----

15/10/22

## ಬಸ್ ನಿಲ್ದಾಣದ ಕಾಮಗಾರಿ

5 **ರಿಜ್ವಾನ್ ಅರ್ಷದ್ (ಶಿವಾಜಿನಗರ):**

ಮಾನ್ಯ **ಸಾರಿಗೆ ಸಚಿವರು** ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ : -:- ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದ ನೆಲಮಂಗಲ ನಗರದಲ್ಲಿ ಹೈಟೆಕ್ ಬಸ್ ನಿಲ್ದಾಣದ ಕಾಮಗಾರಿ ಯಾವ ಹಂತದಲ್ಲಿದೆ; ಆ) ಹೈಟೆಕ್

ಬಸ್ ನಿಲ್ದಾಣಕ್ಕೆ ಮಂಜೂರಾದ ಅನುದಾನವೆಷ್ಟು; ಸದರಿ ಕಾಮಗಾರಿ ನಿರ್ವಹಣೆಯನ್ನು ಯಾವ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ; (ಸಂಪೂರ್ಣ ವಿವರ ನೀಡುವುದು) ಇ) ಹೈಟೆಕ್ ಬಸ್ ನಿಲ್ದಾಣ ನಿರ್ಮಾಣ ಮಾಡಲು ನಗರಸಭೆ ಮತ್ತು ಕೆ.ಎಸ್.ಆರ್.ಟಿ.ಸಿ. ನಡುವೆ ಕಾಮಗಾರಿ ಸ್ಥಳದ ಒಡಂಬಡಿಕೆ (MOU) ಮಾಡಿಕೊಳ್ಳುವ ಪ್ರಸ್ತಾವನೆ ಯಾವ ಹಂತದಲ್ಲಿದೆ; MOU ಮಾಡಿಕೊಂಡಿದ್ದಲ್ಲಿ, ಯಾವ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ; (ಆದೇಶ ಪ್ರತಿಯನ್ನು ನೀಡುವುದು) ಈ) ನೆಲಮಂಗಲ ಹೈಟೆಕ್ ಬಸ್ ನಿಲ್ದಾಣದ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಸೂಚನೆ ನೀಡಲಾಗಿದೆ? (ಕಾಮಗಾರಿಯ MASTER PLAN ನಕ್ಷೆ, ವಿನ್ಯಾಸ ಮಂಜೂರಾದ ಆದೇಶದ ಪ್ರತಿ ನೀಡುವುದು)

----

**ವಿವಿಧ ಯೋಜನೆಗಳು**

6 **Mr. RIZWAN ARSHAD (Shivajinagar (162)):**

ಮಾನ್ಯ **Minister for Rural Development & Panchayat Raj** ದಿನಾಂಕ:- ಅ) ಕಳೆದ ಮೂರು ವರ್ಷಗಳಲ್ಲಿ ನೆಲಮಂಗಲ ಕ್ಷೇತ್ರಕ್ಕೆ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಮಂಜೂರು ಮಾಡಿದ ಅನುದಾನವೆಷ್ಟು; (ಕಾಮಗಾರಿವಾರು ಆದೇಶ ಪ್ರತಿ ಸಹಿತ ವಿವರ ನೀಡುವುದು) ಆ) ಸದರಿ ಕ್ಷೇತ್ರಕ್ಕೆ ಪ್ರಧಾನಮಂತ್ರಿ ಗ್ರಾಮೀಣ ರಸ್ತೆ ಯೋಜನೆಯಡಿ ಮಂಜೂರು ಮಾಡಿದ ಅನುದಾನವೆಷ್ಟು; (ವಿವರ ನೀಡುವುದು) ಇ) ಸದರಿ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಿಂದ ನಮ್ಮ ಗ್ರಾಮನಮ್ಮ ರಸ್ತೆ ಯೋಜನೆಯಡಿ ಮಂಜೂರು ಮಾಡಿದ ಅನುದಾನವೆಷ್ಟು; ಪ್ರಸಕ್ತ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಕ್ಷೇತ್ರವಾರು ವಿವರ ನೀಡುವುದು) ಈ) ಸದರಿ ಕ್ಷೇತ್ರದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಘನ ತಾಜ್ಯ ನಿರ್ವಹಣೆಗೆ ಘಟಕಗಳನ್ನು ನಿರ್ಮಾಣ ಮಾಡಲು ಸರ್ಕಾರ ನಿಗದಿ ಮಾಡಿದ ಅನುದಾನವೆಷ್ಟು; ಇದರ ಅನುಷ್ಠಾನಕ್ಕೆ ಇರುವ ಮಾನದಂಡಗಳೇನು; ಉ) ಸದರಿ ಕ್ಷೇತ್ರದಲ್ಲಿ ಘನ ತ್ಯಾಜ್ಯ ಘಟಕಗಳನ್ನು ಯಾವ ಯಾವ ಸ್ಥಳಗಳಲ್ಲಿ ಗುರುತಿಸಲಾಗಿದೆ? (ವಿವರ ನೀಡುವುದು)

----

**ಯೋಜನೆಗಳು**

7 **Mr. RIZWAN ARSHAD (Shivajinagar (162)):**

ಮಾನ್ಯ **Minister for Social Welfare Department**. ದಿನಾಂಕ:- ಅ) ಕಳೆದ ಮೂರು ವರ್ಷಗಳಿಂದ ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಸಮಾಜ ಕಲ್ಯಾಣ ಇಲಾಖೆಯ ವಿವಿಧ ಯೋಜನೆಗಳಡಿ ಮಂಜೂರು ಮಾಡಿದ ಅನುದಾನವೆಷ್ಟು; (ಯೋಜನಾವಾರು, ಕಾಮಗಾರಿವಾರು ಆದೇಶದ ಪ್ರತಿಗಳೊಂದಿಗೆ ವಿವರ ನೀಡುವುದು) ಆ) ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ವಿಶೇಷ ಯೋಜನೆಯಡಿ ನೀಡಿದ ಅನುದಾನವೆಷ್ಟು; (ಆದೇಶದ ಪ್ರತಿಗಳೊಂದಿಗೆ ವಿವರ ನೀಡುವುದು) ಇ) ಕಳೆದ ಮೂರು ವರ್ಷಗಳಲ್ಲಿ ಮೀಸಲು ವಿಧಾನಸಭಾ ಕ್ಷೇತ್ರವಾದ ನೆಲಮಂಗಲಕ್ಕೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆ ಮಾಡುವಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) ಈ) ಪ್ರಸಕ್ತ ಸಾಲಿನಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ವಿಶೇಷ ಘಟಕ ಯೋಜನೆಯಡಿ ನೆಲಮಂಗಲ ಕ್ಷೇತ್ರಕ್ಕೆ ಅನುದಾನ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಬಿಡುಗಡೆ ಮಾಡಿರುವ ಅನುದಾನವೆಷ್ಟು? (ವಿವರ ನೀಡುವುದು)

----

## ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ.

8 **Mr. RIZWAN ARSHAD (Shivajinagar (162)):**

ಮಾನ್ಯ **Minister for Youth Empowerment and Sports Department.** ದಿನಾಂಕ:- ಅ) ರಾಯಭಾಗ ತಾಲ್ಲೂಕಿನ ಸಾರ್ವಜನಿಕ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಆ) ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ಪ್ರಸ್ತಾವನೆಗೆ ಮಂಜೂರಾತಿ ನೀಡಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು; ಇ) ಈ ಅಭಿವೃದ್ಧಿ ಕಾಮಗಾರಿಗೆ ಸರ್ಕಾರ ನಿಗಧಿಪಡಿಸಿ ಒದಗಿಸಬಹುದಾದ ಅಂದಾಜು ಮೊತ್ತವೆಷ್ಟು; ಈ) ಇಲ್ಲದಿದ್ದಲ್ಲಿ, ಈ ಸಾರ್ವಜನಿಕ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡಲು ಸರ್ಕಾರಕ್ಕಿರುವ ತೊಂದರೆಗಳೇನು? ವಿವರ ನೀಡುವುದು)

----

## ವಾಜಪೇಯಿ ವಸತಿ ಶಾಲೆ.

9 **Mr. RIZWAN ARSHAD (Shivajinagar (162)):**

ಮಾನ್ಯ **Minister for Social Welfare Department.** ದಿನಾಂಕ:- ಅ) ಬೆಳಗಾವಿ ಜಿಲ್ಲೆ, ರಾಯಭಾಗ ತಾಲ್ಲೂಕಿನ ಮೇಖಳಿ ಗ್ರಾಮದಲ್ಲಿ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸದರಿ ಮೇಖಳಿ ಗ್ರಾಮದ ವಸತಿ ಶಾಲೆ ನಿರ್ಮಾಣಕ್ಕೆ ಅಗತ್ಯವಾಗಿ ಬೇಕಾಗಿರುವ ಲಭ್ಯ ವಿರುವ ಜಮೀನನ್ನು ಗುರುತಿಸಿರುವುದು ಸಹ ಸರ್ಕಾರದ ಗಮನಕ್ಕೆ ಬಂದಿದೆಯೇ; ಆ) ಬಂದಿದ್ದಲ್ಲಿ, ಸದರಿ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇ) ಹಾಗಿದ್ದಲ್ಲಿ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಅನುದಾನವನ್ನು ಬಿಡುಗಡೆ ಮಾಡಿ ಕಾಮಗಾರಿ ಪ್ರಾರಂಭಿಸಲಾಗುವುದೇ; ಈ) ಇಲ್ಲದಿದ್ದಲ್ಲಿ, ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು; ಉ) ಇಲ್ಲದಿದ್ದಲ್ಲಿ, ಅನುದಾನ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

----

## ಅನುದಾನ ಬಿಡುಗಡೆ.

10 **Mr. RIZWAN ARSHAD (Shivajinagar (162)):**

ಮಾನ್ಯ **Minister for Youth Empowerment and Sports Department.** ದಿನಾಂಕ:- ಅ) ಕಳೆದ ಮೂರು ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿರುವ ಕ್ರೀಡಾಂಗಣಗಳ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರ ನಿಗದಿಪಡಿಸಿ ಬಿಡುಗಡೆ ಮಾಡಿರುವ ಅನುದಾನವೆಷ್ಟು; (ಸಂಪೂರ್ಣ ವಿವರ ನೀಡುವುದು) ಆ) ಈ ಅನುದಾನದ ಪೈಕಿ ನಿರ್ವಹಿಸಿರುವ ಕಾಮಗಾರಿಗಳಾವುವು; ಈ ಕಾಮಗಾರಿಗಳ ಪೈಕಿ ಪೂರ್ಣಗೊಂಡ ಹಾಗೂ ಅಪೂರ್ಣಗೊಂಡಿರುವ ಕಾಮಗಾರಿಗಳಾವುವು; ಕಾಮಗಾರಿಗಳು ಅಪೂರ್ಣವಾಗಲು ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು) ಇ) ಈ ಅನುದಾನದ ಪೈಕಿ ಬೆಳಗಾವಿ ಜಿಲ್ಲೆ ರಾಯಭಾಗ ಮತಕ್ಷೇತ್ರಕ್ಕೆ ಒದಗಿಸಿರುವ ಅನುದಾನವೆಷ್ಟು; ಈ ಅನುದಾನದಲ್ಲಿ ನಿರ್ವಹಿಸಿರುವ ಕಾಮಗಾರಿಗಳಾವುವು; (ಸಂಪೂರ್ಣ ವಿವರ ನೀಡುವುದು) ಈ) ಪ್ರಸಕ್ತ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ಕ್ರೀಡಾಂಗಣ ಕಾಮಗಾರಿಗಳಿಗಾಗಿ ಸರ್ಕಾರ ಒದಗಿಸಬಹುದಾದ ಅಂದಾಜು ಮೊತ್ತವೆಷ್ಟು? (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

----

## ಹೊಸ ಮಾರ್ಗದಲ್ಲಿ ಬಸ್ ಸಂಚಾರ

11 **Mr. RIZWAN ARSHAD (Shivajinagar (162)):**

ಮಾನ್ಯ **Minister for Transport** ದಿನಾಂಕ:- ಅ) ಬೆಳಗಾವಿ ಜಿಲ್ಲೆ, ರಾಯಭಾಗ K.S.R.T.C. ಘಟಕದಿಂದ ರಾಯಭಾಗ ಶಿರಡಿ ಮತ್ತು ರಾಯಭಾಗ ಶ್ರೀಶೈಲ ಮಾರ್ಗಗಳಲ್ಲಿ ಹೊಸದಾಗಿ ಬಸ್ ಸಂಚಾರ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಆ) ಈ ಮಾರ್ಗಗಳಲ್ಲಿ ಬಸ್ಸ್‌ಗೆ ಬೇಡಿಕೆ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಹೊಸ ಮಾರ್ಗಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಹೊಸ ವೋಲ್ವೊ ಬಸ್ಸ್ ಸಂಚರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಇ) ಇಲ್ಲವಾದಲ್ಲಿ, ಕಾರಣಗಳೇನು? (ವಿವರ ನೀಡುವುದು)

----

## ಬಹುಗ್ರಾಮ ಕುಡಿಯುವ ನೀರಿನ ಯೋಜನೆ.

12 **Mr. RIZWAN ARSHAD (Shivajinagar (162)):**

ಮಾನ್ಯ **Minister for Rural Development & Panchayat Raj** ದಿನಾಂಕ:- ಅ) ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ ಬಿರನಾಳ ಹಾಗೂ ಇತರೆ 13 ಗ್ರಾಮಗಳ ಮತ್ತು ಕೆಂಪಟ್ಟಿ ಹಾಗೂ ಇತರೆ 4 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ; ಯಾವ ಕಾಲಮಿತಿಯಲ್ಲಿ ಈ ಪ್ರಸ್ತಾವನೆಗೆ ಅನುಮೋದನೆ ನೀಡಿ ಕ್ರಿಯಾ ಯೋಜನೆಯಲ್ಲಿ ಸೇರ್ಪಡಿಸಿ ಕಾಮಗಾರಿ ಆರಂಭಿಸಲಾಗುವುದು; ಇ) ಇಲ್ಲವಾದಲ್ಲಿ, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಿ ಇಲ್ಲಿನ ಸಾರ್ವಜನಿಕರಿಗೆ ಕುಡಿಯುವ ನೀರಿನ ಅನುಕೂಲ ಕಲ್ಪಿಸಲು ಸರ್ಕಾರಕ್ಕಿರುವ ತೊಂದರೆಗಳೇನು; ಈ) ಇಲ್ಲವಾದಲ್ಲಿ, ಯಾವ ಕಾಲಮಿತಿಯಲ್ಲಿ ಈ ಯೋಜನೆಯ ಕಾಮಗಾರಿ ಪ್ರಾರಂಭಿಸಿ, ಪೂರ್ಣಗೊಳಿಸಿ ಇಲ್ಲಿನ ಸಾರ್ವಜನಿಕರಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿ ಅನುಕೂಲ ಮಾಡಿಕೊಡಲಾಗುವುದು?

----

## ಕೃಷಿ ವಿಜ್ಞಾನ ಕೇಂದ್ರ

13 **Mr. RIZWAN ARSHAD (Shivajinagar (162)):**

ಮಾನ್ಯ **Minister for Agriculture** ದಿನಾಂಕ:- ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕಿನ ಕುರಬೂರು ಫಾರ್ಮ್‌ನಲ್ಲಿರುವ ಕೃಷಿ ವಿಜ್ಞಾನ ಕೇಂದ್ರದಲ್ಲಿ ನಡೆದಿರುವ ಕ್ಷೇತ್ರ ಪ್ರಯೋಗಗಳು, ಪ್ರಾತ್ಯಕ್ಷಿಕೆಗಳು, ತರಬೇತಿ ಕಾರ್ಯಕ್ರಮಗಳು, ಕ್ಷೇತ್ರ ಪರೀಕ್ಷೆಗಳು ಎಷ್ಟು; ವಿವಿಧ ಬೇಸಾಯ ವ್ಯವಸ್ಥೆಗಳಡಿಯಲ್ಲಿ ನಿರ್ದಿಷ್ಟ ತಂತ್ರಜ್ಞಾನಗಳನ್ನು ಗುರುತಿಸಲು ಕ್ಷೇತ್ರದಲ್ಲಿಯೇ ಪರೀಕ್ಷೆಗಳನ್ನು ಕೈಗೊಂಡು ಅಭಿವೃದ್ಧಿ ತಂತ್ರಜ್ಞಾನ, ಬೆಳೆ ಉತ್ಪಾದನೆ, ಬೆಳೆ ಸರಂಕ್ಷಣೆ, ತೋಟಗಾರಿಕೆ ಹಾಗೂ ಹೈನುಗಾರಿಕೆ ವಿಷಯದಲ್ಲಿ ತಂತ್ರಜ್ಞಾನವನ್ನು ಪರಿಷ್ಕರಿಸಲಾಗಿದೆಯೇ; ಹಾಗಿದ್ದಲ್ಲಿ ಎಷ್ಟೆಷ್ಟು ತಂತ್ರಜ್ಞಾನವನ್ನು ಪರಿಷ್ಕರಿಸಲಾಗಿದೆ ಆ ತಂತ್ರಜ್ಞಾನಗಳಾವುವು; ಪರಿಷ್ಕರಿಸಿದ ತಂತ್ರಜ್ಞಾನದ ಮಾಹಿತಿಯನ್ನು ರೈತರಿಗೆ ಪ್ರಚುರಪಡಿಸಿಲಾಗಿದೆಯೇ; (ವಾರ್ಷಿಕವಾರು ಸಂಪೂರ್ಣ ವಿವರ ನೀಡುವುದು) ಆ) ಕಳೆದ ಮೂರು ವರ್ಷಗಳಿಂದ ಸದರಿ ಕೇಂದ್ರದ ವತಿಯಿಂದ ಗ್ರಾಮೀಣ ಭಾಗದ ಎಷ್ಟು ಯುವಕ ಯುವತಿಯರಿಗೆ ಪ್ರತ್ಯೇಕವಾಗಿ ಕೃಷಿಗೆ ಸಂಬಂಧಿಸಿದ ವಿವಿಧ ವಿಷಯಗಳಲ್ಲಿ ತರಬೇತಿ ಕಾರ್ಯಗಾರಗಳನ್ನುಕೈಗೊಳ್ಳಲಾಗಿದೆ; ಈ ತರಬೇತಿ ಕಾಂರ್ಯಾಗಾರದಿಂದ ಎಷ್ಟು ಯುವಕ ಯುವತಿಯರು ಪ್ರಯೋಜನ ಪಡೆದುಕೊಂಡಿರುತ್ತಾರೆ;

(ಸಂಪೂರ್ಣ ವಿವರ ನೀಡುವುದು) ಇ) ಈ ಕೃಷಿ ವಿಜ್ಞಾನ ಕೇಂದ್ರವನ್ನು ಶಿಡ್ಲಘಟ್ಟ ತಾಲ್ಲೂಕಿಗೆ ಸ್ಥಳಾಂತರ ಮಾಡುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಯಾವ ಆಧಾರದ ಮೇಲೆ ಸ್ಥಳಾಂತರ ಮಾಡಲಾಗುವುದು; (ಸಂಪೂರ್ಣ ವಿವರ ನೀಡುವುದು) ಈ) ಈ ಕೃಷಿ ವಿಜ್ಞಾನ ಕೇಂದ್ರವು ಸುಮಾರು 380 ಎಕರೆ ಜಮೀನಿನ ಆವರಣದಲ್ಲಿ ಸುಮಾರು 30 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು, ಈ ವಿಜ್ಞಾನ ಕೇಂದ್ರಕ್ಕೆ ಅವಶ್ಯಕವಿರುವ ಮೂಲಭೂತ ಸೌಕರ್ಯಗಳನ್ನು ರೂ.15.00 ಕೋಟಿ ವೆಚ್ಚದಲ್ಲಿ ಒದಗಿಸಲಾಗಿದ್ದು, ಸದರಿ ವಿಜ್ಞಾನ ಕೇಂದ್ರದಲ್ಲಿ ರೈತರುಗಳು ಉತ್ತಮ ಪ್ರಯೋಜನ ಪಡೆಯುತ್ತಿದ್ದರೂ ಸಹ ಸ್ಥಳಾಂತರ ಮಾಡುತ್ತಿರುವುದು ಸಮಂಜಸವೇ; ಉ) ಕೇಂದ್ರವನ್ನು ಸ್ಥಳಾಂತರ ಮಾಡಿದ್ದಲ್ಲಿ, ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವುದರೊಂದಿಗೆ ಈ ಭಾಗದ ರೈತರುಗಳಿಗೆ/ಯುವ ರೈತರುಗಳಿಗೆ ಹಾಗೂ ಪಕ್ಕದ ಜಿಲ್ಲೆಯ ರೈತರುಗಳಿಗೆ ತೀರಾ ಅನಾನುಕೂಲವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೃಷಿ ವಿಜ್ಞಾನ ಕೇಂದ್ರವನ್ನು ಸ್ಥಳಾಂತರ ಮಾಡುವ ಪ್ರಸ್ತಾವನೆಯನ್ನು ಯಾವ ಕಾಲಮಿತಿಯೊಳಗೆ ಕೈಬಿಡಲಾಗುವುದು (ವಿವರ ನೀಡುವುದು)?

----

## ಕೃಷಿ ಇಲಾಖೆಯ ವಿವಿಧ ಯೋಜನೆಗಳು

**14 Mr. RIZWAN ARSHAD (Shivajinagar (162)):**

ಮಾನ್ಯ **Minister for Agriculture** ದಿನಾಂಕ:- ಅ) 2018 ರಿಂದ 2021ರವರೆಗೆ ಚಿಕ್ಕಬಳ್ಳಾಪುರ ಜಿಲ್ಲೆ ವ್ಯಾಪ್ತಿಗೆ ಬರುವ ತಾಲ್ಲೂಕುಗಳಿಗೆ ಕೃಷಿ ಭಾಗ್ಯ ಯೋಜನೆ, ಕೃಷಿ ಯಂತ್ರಧಾರೆ ಯೋಜನೆ, ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಸೂಕ್ಷ್ಮ ನೀರಾವರಿ ಹಾಗೂ ಕೃಷಿ ಯಾಂತ್ರೀಕರಣ ಯೋಜನೆಗಳಡಿ ಬಿಡುಗಡೆಯಾದ ಅನುದಾನ ಎಷ್ಟು; ಈ ಯೋಜನೆಗಳಡಿ ಬಳಕೆಯಾದ ಹಾಗೂ ಬಳಕೆಯಾಗದೆ ಬಾಕಿ ಉಳಿದಿರುವ ಅನುದಾನವೆಷ್ಟು (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು); ಆ) 2018 ರಿಂದ 2021ರವರೆಗೆ ಸದರಿ ತಾಲ್ಲೂಕುಗಳಲ್ಲಿ ಕೃಷಿ ಭಾಗ್ಯ ಯೋಜನೆಯಡಿ ಮಂಜೂರಾದ ಕೃಷಿ ಹೊಂಡ, ಪಾಲಿಥೀನ್ ಹೊದಿಕೆ, ಡೀಸೆಲ್ ಪಂಪ್‌ಸೆಟ್, ಲಘು ನೀರಾವರಿ ಘಟಕ, ಕೃಷಿ ಹೊಂಡದ ಸುತ್ತಲು ನೆರಳು ಪರದೆ ಘಟಕಗಳೆಷ್ಟು; ಇ) ಮಂಜೂರು ಮಾಡಲಾದ ಈ ಯೋಜನೆಗಳಿಗೆ ಎಷ್ಟೆಷ್ಟು ಸಹಾಯಧನವನ್ನು ನೀಡಲಾಗಿದೆ; ಈ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು); ಈ) ಮೇಲ್ಕಂಡ ಅವಧಿ ಹಾಗೂ ತಾಲ್ಲೂಕುಗಳಲ್ಲಿ ಕೃಷಿ ಯಂತ್ರಧಾರೆ ಯೋಜನೆಯಡಿ ರೈತರಿಗೆ ಸಕಾಲದಲ್ಲಿ ಮತ್ತು ಕಡಿಮೆ ಬಾಡಿಗೆ ದರದಲ್ಲಿ ಕೃಷಿಯಂತ್ರೋಪಕರಣಗಳನ್ನು ಒದಗಿಸುವ ಸಲುವಾಗಿ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆಯೇ; ಉ) ಹಾಗಿದ್ದಲ್ಲಿ, ಎಲ್ಲೆಲ್ಲಿ ಸ್ಥಾಪಿಸಲಾಗಿದೆ; ಅವುಗಳ ಸಂಖ್ಯೆ ಎಷ್ಟು; ಊ) ಈ ಕೇಂದ್ರಗಳಿಗೆ ಯಾವ ಯಾವ ಕೃಷಿ ಯಂತ್ರೋಪಕರಣಳನ್ನು ಒದಗಿಸಲಾಗಿದೆ ಮತ್ತು ಕೃಷಿ ಯಂತ್ರಧಾರೆ ಯೋಜನೆಯಡಿ ರೈತರುಗಳು ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆಗೆ ಪಡೆಯಲು ಇಲಾಖೆಯು ನಿಗದಿಪಡಿಸಿದ ದರ ಎಷ್ಟು; ಋ) ಸದರಿ ಯೋಜನೆಯಡಿ ವಿವಿಧ ಯಂತ್ರಗಳನ್ನು ಬಾಡಿಗೆ ಪಡೆದು ಸದುಪಯೋಗಪಡಿಸಿಕೊಂಡ ರೈತರೆಷ್ಟು (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು); ಎ) ಮೇಲ್ಕಂಡ ಅವಧಿ ಹಾಗೂ ತಾಲ್ಲೂಕುಗಳಲ್ಲಿ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಸೂಕ್ಷ್ಮ ನೀರಾವರಿ ಯೋಜನೆಯಡಿ ಮಂಜೂರಾದ ತುಂತುರು ನೀರಾವರಿ ಘಟಕ ಹಾಗೂ ಹನಿ ನೀರಾವರಿ ಘಟಕಗಳೆಷ್ಟು; (ವಿವರ ನೀಡುವುದು) ಏ) ಮಂಜೂರು ಮಾಡಲಾದ ಈ ಘಟಕಗಳಿಗೆ ಆಯ್ಕೆಯಾದ ಫಲಾನುಭವಿಗಳೆಷ್ಟು ಹಾಗೂ ಆಯ್ಕೆಯಾದ ಫಲಾನುಭವಿಗಳಿಗೆ ನೀಡಲಾದ ಸಹಾಯಧನವೆಷ್ಟು (ಘಟಕಗಳ ಹಾಗೂಫಲಾನುಭವಿಗಳ ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು); ಐ) ಮೇಲ್ಕಂಡ ಅವಧಿ ಹಾಗೂ ತಾಲ್ಲೂಕುಗಳಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಯಾವ ಯಾವ ಯಂತ್ರೋಪಕರಣಗಳನ್ನು ರೈತರಿಗೆ ನೀಡಲಾಗಿದೆ ಹಾಗೂ ಸಾಮಾನ್ಯ ರೈತರು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರುಗಳು

ಯಂತ್ರೋಪಕರಣಗಳನ್ನು ಖರೀದಿ ಮಾಡಲು ನೀಡಲಾದ ಸಹಾಯಧನವೆಷ್ಟು (ಫಲಾನುಭವಿಗಳ ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)?

----

**ಭವನಗಳ ನಿರ್ಮಾಣ**

15 **Mr. RIZWAN ARSHAD (Shivajinagar (162)):**

ಮಾನ್ಯ **Minister for Social Welfare Department**. ದಿನಾಂಕ:- ಅ) ಚಿಂತಾಮಣಿ ತಾಲ್ಲೂಕು ಮುರುಗಮಲ್ಲ ಹೋಬಳಿ ಪಾತಕೋಟೆ ಗ್ರಾಮದ ಸರ್ವೆ ನಂ.181ರಲ್ಲಿ 820 ಗುಂಟೆ ಜಮೀನು ಪರಿಶಿಷ್ಟ ಪಂಗಡದ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಮುಂಗಾನಹಳ್ಳಿ ಹೋಬಳಿ ಬೋಡಂಪಲ್ಲಿ ಗ್ರಾಮದ ಸರ್ವೆ ನಂ.44 ರಲ್ಲಿ 930 ಗುಂಟೆ ಜಮೀನು ಪರಿಶಿಷ್ಟ ಜಾತಿ ಡಾ:ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗೆ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಆ) ಬಂದಿದ್ದಲ್ಲಿ, ಸದರಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಸತಿ ಶಾಲೆಗಳ ಕಟ್ಟಡವನ್ನು ಕಟ್ಟಲು ಸರ್ಕಾರದಿಂದ ಹಣ ಬಿಡುಗಡೆಯಾಗಿದೆಯೇ; ಇ) ಹಣ ಬಿಡುಗಡೆಯಾಗಿದ್ದಲ್ಲಿ, ಕಟ್ಟಡಗಳನ್ನು ಕಟ್ಟಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು (ವಿವರ ನೀಡುವುದು); ಈ) ಮುಂಗಾನಹಳ್ಳಿ ಹೋಬಳಿ ಎಸ್.ರಾಗುಟ್ಟಹಳ್ಳಿ ಪಂಚಾಯ್ತಿ ಮಾದಮಂಗಲ ಗ್ರಾಮದಲ್ಲಿ ಡಾ:ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಕೈಗೊಳ್ಳಲಾದ ಕ್ರಮಗಳೇನು; ಉ) ಸದರಿ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಮಾಡುವ ಬಗ್ಗೆ ನಾಲ್ಕು ವರ್ಷಗಳ ಹಿಂದೆ ಟೆಂಡರ್ ಆಗಿದ್ದು,ಇದುವರೆವಿಗೂ ಭವನ ನಿರ್ಮಾಣ ಮಾಡಲು ಅಧಿಕಾರಿಗಳು ವಿಳಂಬ ಮಾಡುತ್ತಿರುವುದು ಏಕೆ; ಹಾಗು ಸದರಿ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು (ವಿವರ ನೀಡುವುದು)?

----